# 27ರ ಕೆಂಪೇಗೌಡ ಜಯಂತಿಗೆ ಬನ್ನಿ, ಪ್ರಚಾರ ರಥಕ್ಕೆ ಚಾಲನೆ ನೀಡಿ ಸೋಮೇಶ್ವರನಾಥ ಸ್ವಾಮೀಜಿ ಕರೆ

**ತಾಂಡವಪುರ:** ಇದೇ ತಿಂಗಳ ಜೂ.27ರಂದು ನಡೆಯಲಿರುವ ಕೆಂಪೇಗೌಡ 512ನೇ ಜಯಂತಿ ಮಹೋತ್ಸವಕ್ಕೆ ಜಾತ್ಯಾತೀತ, ಪಕ್ಷಾತೀತವಾಗಿ ಎಲ್ಲರೂ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿ ಎಂದು ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಕರೆ ನೀಡಿದರು.

ಕೆಂಪೇಗೌಡ ಜಯಂತೋತ್ಸವ ಸಮಿತಿ, ರಾಜ್ಯ ಒಕ್ಕಲಿಗರ ಸಂಘ ಹಾಗೂ ಮೈಸೂರು– ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ಸಂಯುಕ್ತಾಶ್ರಯದಲ್ಲಿ ಕೆಜಿ ಕೊಪ್ಪಲಿನ ಶ್ರೀ ಬಂದತಮ್ಮ ದೇವಾಲಯ ಎದುರು 512 ನೇ ಶ್ರೀ ಕೆಂಪೇಗೌಡರ ಜಯಂತಿ ಮಹೋತ್ಸವದ ಪ್ರಚಾರ ರಥಕ್ಕೆ ಪೂಜೆ ಹಾಗೂ ಪುಷ್ಪಾರ್ಚನೆ ನೇರವೇರಿಸಿ ಮಾತನಾಡಿದರು. ಕೆಂಪೇಗೌಡರು ಒಂದು ಸೀಮಿತರಾಗಿ ನಾಡು ಕಟ್ಟಿಲ್ಲ. ಎಲ್ಲಾ ಸಮುದಾಯಕ್ಕೂ ಅನುಗುಣವಾಗಿ ಪೇಟೆಗಳನ್ನು ನಿರ್ಮಿಸಿ ಮಾದರಿಯಾಗಿದ್ದಾರೆ. ಅವರ ಕೊಡುಗೆಗಳನ್ನು ಸ್ಮರಿಸುವ ದಿಸೆಯಲ್ಲಿ ನಡೆಯುವ ಜಯಂತಿ ಕಾರ್ಯಕ್ರಮದ ಪ್ರಚಾರ ರಥಕ್ಕೆ ಚಾಲನೆ ನೀಡಲಾಗಿದೆ. ಇಂದಿನಿಂದ ಜಿಲ್ಲೆ, ತಾಲ್ಲೂಕು ಹಾಗೂ ನಗರ ಭಾಗದಲ್ಲಿ ಕೆಂಪೇಗೌಡರ ರಥಯಾತ್ರೆ ಸಂಚರಿಸಲಿದೆ. ಜೂ.27ರ ಜಯಂತಿಯಲ್ಲಿ ಎಲ್ಲರೂ ಭಾಗವಹಿಸಿ ಕಾರ್ಯಕ್ರಮದ ಸಂದೇಶ ಮುಂದಿನ ಪೀಳಿಗೆಗೆ ತಲುಪಿಸುವ ಪ್ರಯತ್ನ ಕ್ಕೆ ಎಲ್ಲರ ಸಹಕಾರ ಇರಲಿದೆ ಎಂದರು.

ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ ಕೆಂಪೇಗೌಡ ಜಯಂತಿ ವಿಚಾರದಲ್ಲಿ ತನ್ನದೇ ಆದ ಇತಿಹಾಸ ಹೊಂದಿದೆ. ಅದನ್ನು ಮತ್ತಷ್ಟು ವಿಜೃಂಭಣೆಯಿಂದ ಆಚರಿಸುವ ಕೆಲಸ ಇತ್ತೀಚಿನ ದಿನಗಳಲ್ಲಿ ನಡೆಯುತ್ತಿದೆ. ಈ ನಿಟ್ಟಿನಲ್ಲಿ ಪ್ರಚಾರ ರಥಕ್ಕೆ ಸಾಮೂಹಿಕವಾಗಿ ಸ್ವಾಮೀಜಿಯವರ ಸಾನಿಧ್ಯದೊಂದಿಗೆ ಚಾಲನೆ ನೀಡಿದ್ದೇವೆ. ಹೆಚ್ಚಿನ ಸಂಖ್ಯೆಯಲ್ಲಿ ಕೆಂಪೇಗೌಡ ಜಯಂತಿಯಲ್ಲಿ ಭಾಗವಹಿಸಿ ಎಂದು ಹೇಳಿದರು.

ಶಾಸಕ ಕೆ.ಹರೀಶ್ ಗೌಡ ಮಾತನಾಡಿ, ಈಗಾಗಲೇ



ಕೆಂಪೇಗೌಡ ಜಯಂತಿಗೆ ಅಗತ್ಯ ಸಹಕಾರ ನೀಡುವುದಾಗಿ ಹೇಳಿದ್ದೇನೆ. ಬಹುತೇಕ ಜಯಂತಿಗಳಿಗೆ ನನ್ನ ಅಧ್ಯಕ್ಷತೆಯೇ ಇರುತ್ತದೆ. ಅದರಂತೆ ಕೆಂಪೇಗೌಡ ಜಯಂತಿಯನ್ನು ಸಮುದಾಯದ ಎಲ್ಲರೂ ಪಕ್ಷಾತೀತವಾಗಿ ವಿಜೃಂಭಣೆಯಿಂದ ಈ ಸಾಲಿನಲ್ಲಿ ಆಚರಿಸುತ್ತಿರುವುದು ಸಂತಸದ ಸಂಗತಿ. ಕೆಂಪೇಗೌಡರು ಎಲ್ಲಾ ಸಮಾಜಕ್ಕೂ ನೀಡಿರುವ ಕೊಡುಗೆ ಹಾಗೂ ಅವರ ಆದರ್ಶ ವ್ಯಕ್ತಿತ್ವವನ್ನು ಸಾರುವ ನಿಟ್ಟಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜಯಂತಿಯಲ್ಲಿ ಭಾಗವಹಿಸಬೇಕಿದೆ. ಈ ನಿಟ್ಟಿನಲ್ಲಿ ಜಯಂತೋತ್ಸವ ಸಮಿತಿ ಶ್ರಮಿಸುತ್ತಿದ್ದು ಎಲ್ಲರೂ ಸಹಕರಿಸಿ ಎಂದು ಹೇಳಿದರು.

ಜಯತೋತ್ಸವ ಸಮಿತಿ ಅಧ್ಯಕ್ಷ ಪ್ರಶಾಂತ್ ಗೌಡ ಮಾತನಾಡಿ, ಪ್ರತಿ ವರ್ಷಕ್ಕೂ ಕೆಂಪೇಗೌಡರ ಜಯಂತಿ ಆಚರಣೆಯ ಸಂಭ್ರಮವನ್ನು ಹೆಚ್ಚಿಸುತ್ತಾ ಬರಲಾಗುತ್ತಿದೆ. ಈ ಸಾಲಿನಲ್ಲಿ ಚಾಮರಾಜನಗರ ಜಿಲ್ಲೆಯ ತಾಲ್ಲೂಕುಗಳಿಗೂ ಸಮಿತಿ ಹೋಗಿ ಆಹ್ವಾನಿಸುವ ಕೆಲಸವನ್ನು ತಂಡ ಮಾಡುತ್ತಿದ್ದೇವೆ. ಜತೆಗೆ ಇಂದು ಪ್ರಚಾರ ರಥಕ್ಕೆ ಚಾಲನೆ ನೀಡಿದ್ದು, ಹಿನಕಲ್, ಹೂಟಗಳ್ಳಿ, ಬೆಳವಾಡಿ, ಕೂರ್ಗಳ್ಳಿ, ಮೈದಾನಹಳ್ಳಿ, ಆನಂದೂರು, ಹೊಸಕೋಟೆ, ಗುಂಗ್ರಾಲ್ ಛತ್ರ, ಯಲಚನಹಳ್ಳಿ, ಇಲವಾಲ ಗ್ರಾಮಗಳಲ್ಲಿ ಪ್ರಚಾರ ಸಂಚರಿಸಲಿದೆ. ಜೂ.27ರಂದು ಎರಡು ಜಿಲ್ಲೆಯಿಂದ ಅತಿಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಜಯಂತಿಯನ್ನು ಯಶಸ್ವಿಗೊಳಿಸಬೇಕೆಂದು ಈ ಮೂಲಕ ಕೇಳಿಕೊಳ್ಳುವುದಾಗಿ ಹೇಳಿದರು.

ಶಾಸಕ ಶ್ರೀವತ್ಸ, ಮಾಜಿ ಸಂಸದ ಪ್ರತಾಪಸಿಂಹ, ಮಾಜಿ ಶಾಸಕ ಎಲ್.ನಾಗೇಂದ್ರ, ಕೆಂಪೇಗೌಡ ಜಯಂತೋತ್ಸವ ಸಮಿತಿ ಅಧ್ಯಕ್ಷ ಪ್ರಶಾಂತ್ ಗೌಡ, ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಜಿ.ಗಂಗಾಧರ್, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಾದ ಕೆ.ವಿ.ಶ್ರೀಧರ್, ಡಾ.ಎಂ.ಬಿ.ಮಂಜೇಗೌಡ, ನಗರಪಾಲಿಕೆ ಮಾಜಿ ಸದಸ್ಯರಾದ ಪ್ರೇಮಾಶಂಕರೇಗೌಡ, ಎಸ್.ಬಿ.ಎಂ.ಮಂಜು, ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಎಂ.ಮರಿಸ್ವಾಮಿ,ಗೌರವಾಧ್ಯಕ್ಷ ಆಲತೂರು ಜಯರಾಮ್ ಉಪಾಧ್ಯಕ್ಷ ರವಿಕುಮಾರ್ ರಾಜಕೀಯ, ಬನ್ನೂರು ಮಹೇಶ್, ಪ್ರಧಾನ ಕಾರ್ಯದರ್ಶಿ ಎಂ.ಈ.ಚೇತನ್, ನಿರ್ದೇಶಕರಾದ ಒಂಟಿಕೊಪ್ಪಲು ಗುರುರಾಜ್, ರವಿ, ಬಿ.ಪಿ.ಬೋರೇಗೌಡ, ಗಿರೀಶ್ ಗೌಡ, ಜಿ. ಕುಮಾರ್ ಗೌಡ, ಎಂ.ಸುಶೀಲ ನಂಜಪ್ಪ, ಉಮೇಶ್, ಸಮುದಾಯದ ಮುಖಂಡರಾದ ಬೀಡನಹಳ್ಳಿ ಸತೀಶ್ ಗೌಡ, ಕರ್ನಾಟಕ ಕಾವಲುಪಡೆ ಅಧ್ಯಕ್ಷ ಮೋಹನ್ ಕುಮಾರ್ ಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಸದಸ್ಯೆ ಲಕ್ಷ್ಮಿದೇವಿ, ಮೈಮುಲ್ ನಿರ್ದೇಶಕ ಊಮಾಶಂಕರ್, ರಾಕೇಶ್ ಗೌಡ, ತಾಲ್ಲೂಕು ಒಕ್ಕಲಿಗರ ಸಂಘದ ಕೃಷ್ಣೇಗೌಡ, ಕೆ.ಜಿ.ಕೊಪ್ಪಲು ರಾಜಣ್ಣ, ಜೆ.ಪಿ.ನಗರ ಕೃಷ್ಣ, ನಿವೃತ್ತ ಪೊಲೀಸ್ ಅಧಿಕಾರಿ ಮರಿಗೌಡ, ಮಾಜಿ ಮೇಯರ್ ಆರ್.ಲಿಂಗಪ್ಪ, ಕಾವಲುಪಡೆ ರಾಜ್ಯಧ್ಯಕ್ಷ ಮೋಹನ್ ಕುಮಾರ್ ಗೌಡ, ಮಂಚೇಗೌಡನ ಕೊಪ್ಪಲು ರವಿ, ಸುಮಿತ್ರಾ ರಮೇಶ್, ಹೇಮಾ ನಂದೀಶ್, ತೇಜೇಸ್ ಲೋಕೇಶ್ ಗೌಡ, ಬಿಜೆಪಿ ಮುಖಂಡ ದಿನೇಶಗೌಡ, ಶಿವಶಂಕರ್ ಇನ್ನಿತರರು ಉಪಸ್ಥಿತರಿದ್ದರು.

**ಇಂದು ರಥದ ಪ್ರಚಾರ ಮಾರ್ಗ:** ಬುಧವಾರ ಗದ್ದಿಗೆ, ಕರಿಮುದ್ದನಹಳ್ಳಿ, ಅಸ್ವಾಳ್, ಸೋನಹಳ್ಳಿ, ಸಿಂಗ ಮಾರನಹಳ್ಳಿ, ಗಂಗರ ಹೊಸಹಳ್ಳಿ, ಕೊತ್ತೇಗಾಲ, ಗೊಲ್ಲನಬೀಡು, ಹಳದಮನುಗನಹಳ್ಳಿ, ಜಿ.ಬಿ.ಸರಗೂರು, ಕಣಿಯನಹುಂಡಿ, ಬೆಟ್ಟದ ಬೀಡು, ಮಾವಿನಹಳ್ಳಿ, ಗೋಪಾಲಪುರ, ಬಲಹಳ್ಳಿ, ಮರಿಟಿಕ್ಯಾತನಹಳ್ಳಿ, ಗಣಗರಹುಂಡಿ, ಸಾಹುಕಾರಹುಂಡಿ, ದಾಸನಕೊಪ್ಪಲು ಹಾಗೂ ಬೋಗಾದಿಯಲ್ಲಿ ಸಂಚರಿಸಲಿದೆ.

# ‘ಕಲ್ಕಿ 2898 ಎಡಿ’ ಪಾರ್ಟ್ 2 ಪ್ರಭಾಸ್ ಸಿನಿಮಾ ಅಲ್ಲ, ಕಮಲ್ ಹಾಸನ್ ಸಿನಿಮಾ

**ಹೈದರಾಬಾದ್:** ಭಾರತೀಯ ಚಿತ್ರ ರಂಗದ ಇತಿಹಾಸದಲ್ಲಿ ಹೊಸ ಅಧ್ಯಾಯ ಬರೆದಿದ್ದ ‘ಕಲ್ಕಿ 2898 ಎಡಿ’ ಸಿನಿಮಾ 2024ರಲ್ಲಿ ಬಿಡುಗಡೆಯಾಗಿ ಬಾಕ್ಸ್ ಆಫೀಸ್‌ನಲ್ಲಿ ಭಾರೀ ಯಶಸ್ಸು ಸಾಧಿಸಿತ್ತು. ಪುರಾಣ ಮತ್ತು ವಿಜ್ಞಾನ ಕಾಲ್ಪನಿಕ ಕಥಾಹಂದರದ ಅಪೂರ್ವ ಸಂಂ–ೋಜನೆಯೊಂದಿಗೆ ತೆರೆಕಂಡಿದ್ದ ಈ ಸಿನಿಮಾ ವಿಶ್ವಾದ್ಯಂತ ಸಿನಿಪ್ರಿಯರ ಮೆಚ್ಚುಗೆಗೆ ಪಾತ್ರವಾಗಿತ್ತು. ಇದೀಗ ಚಿತ್ರದ ಎರಡನೇ ಭಾಗದ ಬಗ್ಗೆ ನಿರೀಕ್ಷೆ ಗರಿಗೆದರಿದ್ದು, ವಿಶೇಷವಾಗಿ ನಟ ಕಮಲ್ ಹಾಸನ್ ಅಭಿನಯದ ಯಾಸ್ಕಿನ್ ಪಾತ್ರ ಹೊಸ ಚರ್ಚೆಗೆ ಕಾರಣವಾಗಿದೆ.

ನಿರ್ದೇಶಕ ನಾಗ್ ಅಶ್ವಿನ್ ಅವರ ಕನಸಿನ ಯೋಜನೆಯಾಗಿದ್ದ ‘ಕಲ್ಕಿ 2898 ಎಡಿ’ ಚಿತ್ರವು ಭಾರತೀಯ ಸಿನಿರಂಗದ ತಾಂತ್ರಿಕ ಸಾಮರ್ಥ್ಯವನ್ನು ಜಾಗತಿಕ ಮಟ್ಟದಲ್ಲಿ ಪ್ರದರ್ಶಿಸಿತ್ತು. ಅತ್ಯಾಧುನಿಕ ದೃಶ್ಯ ವೈಭವ, ಭವಿಷ್ಯದ ಜಗತ್ತಿನ ಕಲ್ಪನೆ ಹಾಗೂ ಮಹಾಭಾರತದ ಹಿನ್ನೆಲೆಯನ್ನು ಒಟ್ಟುಗೂಡಿಸಿ ಚಿತ್ರ ರೂಪಿಸಿದ್ದ ರೀತಿಗೆ ಪ್ರೇಕ್ಷಕರು ಫಿದಾ ಆಗಿದ್ದರು.

ಮೊದಲ ಭಾಗದಲ್ಲಿ ನಟ ಪ್ರಭಾಸ್ ಭೈರವ ಪಾತ್ರದ ಮೂಲಕ ಆಕ್ಷನ್ ಹಾಗೂ ಮನರಂಜನೆಯ ಮಿಶ್ರಣ ನೀಡಿದರೆ, ಬಾಲಿವುಡ್ ದಿಗ್ಗಜ ಅಮಿತಾಬ್ ಬಚ್ಚನ್ ಅಶ್ವತ್ಥಾಮನ ಪಾತ್ರದಲ್ಲಿ ಭಾವನಾತ್ಮಕ ಮತ್ತು ಪೌರಾಣಿಕ ಆಯಾಮವನ್ನು ತೆರೆದಿಟ್ಟಿದ್ದರು. ದೀಪಿಕಾ ಪಡುಕೋಣೆ ಸುಮತಿ ಪಾತ್ರದ ಮೂಲಕ ಕಥೆಯ ಪ್ರಮುಖ ಕೇಂದ್ರಬಿಂದುವಾಗಿ ಹೊರಹೊಮ್ಮಿದ್ದರು.

ಆದರೆ ಇವರೆಲ್ಲರ ನಡುವೆ ಕೇವಲ ಕೆಲವೇ ನಿಮಿಷಗಳ ಪರದೆಯ ಅವಧಿ ಹೊಂದಿದ್ದ ಕಮಲ್ ಹಾಸನ್ ಅಭಿನಯದ ಯಾಸ್ಕಿನ್ ಪಾತ್ರ ಪ್ರೇಕ್ಷಕರ ಮನಸ್ಸಿನಲ್ಲಿ ಆಳವಾದ ಕುತೂಹಲ ಮೂಡಿಸಿತ್ತು. ಕಥೆಯ ಅಂತ್ಯದಲ್ಲಿ ಈ ಪಾತ್ರದ ಸುತ್ತಲಿನ ರಹಸ್ಯ ಮತ್ತು ಶಕ್ತಿ ಎರಡನೇ ಭಾಗಕ್ಕೆ ಬಲವಾದ ಅಡಿಪಾಯ ಹಾಕಿತ್ತು.

**ಯಾರು ಈ ಯಾಸ್ಕಿನ್?:** ‘ಕಲ್ಕಿ 2898 ಎಡಿ’ ಮೊದಲ ಭಾಗದಲ್ಲಿ ಯಾಸ್ಕಿನ್ ಪಾತ್ರವನ್ನು ಮಾನವಕುಲದ ಭವಿಷ್ಯವನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳಲು ಬಯಸುವ ಪ್ರಬಲ ವ್ಯಕ್ತಿಯಾಗಿ ಚಿತ್ರಿಸಲಾಗಿತ್ತು. ವಯಸ್ಸಾದ, ದುರ್ಬಲ ಹಾಗೂ ಜೀವ ಉಳಿಸಿಕೊಳ್ಳಲು ತಂತ್ರಜ್ಞಾನವನ್ನು ಅವಲಂಬಿಸಿರುವ ವ್ಯಕ್ತಿಯಂತೆ ಕಾಣಿಸಿದ್ದ ಯಾಸ್ಕಿನ್, ಕಥೆಯ ಅಂತ್ಯದಲ್ಲಿ ಅಸಾಧಾರಣ ಶಕ್ತಿಯನ್ನು ಪಡೆಯುವ ಮೂಲಕ ಎಲ್ಲರ ಗಮನ ಸೆಳೆದಿದ್ದ.

ಈ ಪಾತ್ರವನ್ನು ರೂಪಿಸಿದ ರೀತಿಯೇ ಪ್ರೇಕ್ಷಕರಲ್ಲಿ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿತ್ತು. ಯಾಸ್ಕಿನ್ ಸಾಮಾನ್ಯ ಮಾನವನೋ? ಅಥವಾ ಭವಿಷ್ಯದ ಜಗತ್ತಿನಲ್ಲಿ ದೇವರಂತಾಗಲು ಹೊರಟಿರುವ ಶಕ್ತಿಶಾಲಿ ವ್ಯಕ್ತಿಯೋ? ಎಂಬ ಕುತೂಹಲ ಮೂಡಿತ್ತು.

**ಸಿರಮ್‌ನಿಂದ ಬದಲಾಗುವ ಯಾಸ್ಕಿನ್ ಕಥೆ:** ಚಿತ್ರದ ಕ್ಲೈಮ್ಯಾಕ್ಸ್‌ನಲ್ಲಿ ಅತ್ಯಂತ ಮಹತ್ವದ ತಿರುವೊಂದು ಕಾಣಿಸಿಕೊಂಡಿತ್ತು. ಸುಮತಿಯ ಗರ್ಭದಲ್ಲಿರುವ ದೈವಿಕ ಶಕ್ತಿಯೊಂದಿಗೆ ಸಂಬಂಧ ಹೊಂದಿರುವ ವಿಶೇಷ ಸಿರಮ್ ಅನ್ನು ಯಾಸ್ಕಿನ್ ಪಡೆಯುತ್ತಾನೆ. ಆ ಸಿರಮ್ ಸೇವಿಸಿದ ಬಳಿಕ ಅವನ ದೇಹದಲ್ಲಿ ಅಸಾಧಾರಣ ಬದಲಾವಣೆಗಳು ಕಂಡುಬರುತ್ತವೆ.

ಈ ಶಕ್ತಿಯ ಪರಿಣಾಮವಾಗಿ ಯಾಸ್ಕಿನ್ ಹಿಂದಿನಂತಿರುವ ದುರ್ಬಲ ವ್ಯಕ್ತಿಯಾಗಿರುವುದಿಲ್ಲ. ಬದಲಿಗೆ ಅವನಲ್ಲಿ ಅಪಾರ ಶಕ್ತಿ ಸಂಚರಿಸುತ್ತಿರುವುದು ಗೋಚರಿಸುತ್ತದೆ. ವಿಶೇಷವಾಗಿ ಮಹಾಭಾರತದ ಮಹಾವೀರ ಅರ್ಜುನನ ಗಾಂಡೀವವನ್ನು ಸುಲಭವಾಗಿ ಎತ್ತಿ ಹಿಡಿಯುವ ದೃಶ್ಯ ಚಿತ್ರಮಂದಿರಗಳಲ್ಲಿ ಪ್ರೇಕ್ಷಕರಿಂದ ಭಾರೀ ಮೆಚ್ಚುಗೆ ಪಡೆದಿತ್ತು.

ಈ ಒಂದು ದೃಶ್ಯವೇ ಎರಡನೇ ಭಾಗದ ಕಥೆಯ ಕೇಂದ್ರಬಿಂದುವಾಗಬಹುದು ಎಂಬ ಚರ್ಚೆಗೆ ಕಾರಣವಾಗಿತ್ತು. ಯಾಸ್ಕಿನ್ ಪಾತ್ರ ಈಗ ಸಾಮಾನ್ಯ ಪ್ರತಿನಾಯಕನಾಗಿರದೆ, ದೇವತೆಗಳಿಗೆ ಸವಾಲು ಹಾಕಬಲ್ಲ ಶಕ್ತಿಯ ರೂಪಕ್ಕೆ ತಿರುಗಬಹುದು ಎಂಬ ಊಹಾಪೋಹಗಳು ಹರಿದಾಡುತ್ತಿವೆ.



**ಪಾರ್ಟ್–2ನಲ್ಲಿ ಕಮಲ್ ಹಾಸನ್ ಪ್ರಧಾನ ಪಾತ್ರವೇ?:** ಚಿತ್ರ ರಂಗದ ಮೂಲಗಳ ಪ್ರಕಾರ, ‘ಕಲ್ಕಿ 2898 ಎಡಿ ಪಾರ್ಟ್–2’ನಲ್ಲಿ ಕಮಲ್ ಹಾಸನ್ ಅವರ ಯಾಸ್ಕಿನ್ ಪಾತ್ರಕ್ಕೆ ಹೆಚ್ಚಿನ ಪ್ರಾಮುಖ್ಯತೆ ಸಿಗಲಿದೆ ಎನ್ನಲಾಗುತ್ತಿದೆ. ಮೊದಲ ಭಾಗದಲ್ಲಿ ಕೇವಲ ಪರಿಚಯದ ಮಟ್ಟದಲ್ಲಿದ್ದ ಈ ಪಾತ್ರ ಎರಡನೇ ಭಾಗದಲ್ಲಿ ಕಥೆಯ ಪ್ರಮುಖ ಅಕ್ಷವಾಗುವ ಸಾಧ್ಯತೆಯಿದೆ.

ಪ್ರಭಾಸ್ ಅವರ ಭೈರವ ಪಾತ್ರ, ಅಮಿತಾಬ್ ಬಚ್ಚನ್ ಅವರ ಅಶ್ವತ್ಥಾಮ ಪಾತ್ರ ಹಾಗೂ ಕಮಲ್ ಹಾಸನ್ ಅವರ ಯಾಸ್ಕಿನ್ ಪಾತ್ರಗಳ ನಡುವಿನ ಸಂಘರ್ಷವೇ ಚಿತ್ರದ ಮುಖ್ಯ ಆಕರ್ಷಣೆಯಾಗಲಿದೆ ಎಂಬ ನಿರೀಕ್ಷೆ ವ್ಯಕ್ತ ವಾಗಿದೆ.

**ದೈತ್ಯಾಕಾರದ ಯಾಸ್ಕಿನ್ ಲುಕ್ ವೈರಲ್**: ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಕಮಲ್ ಹಾಸನ್ ಅವರ ಹೊಸ ಲುಕ್ ಎಂದು ಹೇಳಲಾಗುತ್ತಿರುವ ಕೆಲವು ಚಿತ್ರಗಳು ವೈರಲ್ ಆಗಿವೆ. ಈ ಚಿತ್ರಗಳಲ್ಲಿ ಅವರು ಹಿಂದಿನ ಭಾಗಕ್ಕಿಂತ ಸಂಪೂರ್ಣ ವಿಭಿನ್ನವಾಗಿ ಕಾಣಿಸುತ್ತಿದ್ದಾರೆ.

ದೈತ್ಯಾಕಾರದ ದೇಹ, ಅಪಾರ ಶಕ್ತಿ ಹಾಗೂ ಭವಿಷ್ಯದ ತಂತ್ರಜ್ಞಾನದಿಂದ ರೂಪುಗೊಂಡ ವ್ಯಕ್ತಿಯಂತೆ ಕಾಣುವ ಈ ಲುಕ್ ಅಭಿಮಾನಿಗಳಲ್ಲಿ ಹೊಸ ಕುತೂಹಲ ಹುಟ್ಟುಹಾಕಿದೆ. ಕೆಲವರು ಇದನ್ನು ಹಾಲಿವುಡ್ ಸಿನಿಮಾಗಳ ದೃಶ್ಯ ವೈಭವಕ್ಕೆ ಹೋಲಿಕೆ ಮಾಡುತ್ತಿದ್ದಾರೆ.

ವಿಶೇಷವಾಗಿ ‘ದಿ ಮಮ್ಮಿ’ ಸರಣಿಯ ವಿಲನ್ ಪಾತ್ರಗಳೊಂದಿಗೆ ಯಾಸ್ಕಿನ್ ಹೊಸ ರೂಪವನ್ನು ಹೋಲಿಸಿ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಗಳು ನಡೆಯುತ್ತಿವೆ. ಆದರೆ ಈ ಚಿತ್ರಗಳ ಬಗ್ಗೆ ಚಿತ್ರತಂಡದಿಂದ ಯಾವುದೇ ಅಧಿಕೃತ ಮಾಹಿತಿ ಹೊರಬಂದಿಲ್ಲ.

ಹೀಗಾಗಿ ವೈರಲ್ ಆಗುತ್ತಿರುವ ಚಿತ್ರಗಳು ನಿಜವೇ ಅಥವಾ ಅಭಿಮಾನಿಗಳಿಂದ ರಚಿಸಲಾದ ಕಲ್ಪನಾ ಚಿತ್ರಗಳೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ

**ಪ್ರಭಾಸ್‌ಗೆ ಅತಿದೊಡ್ಡ ಸವಾಲಾಗಲಿದೆಯೇ ಯಾಸ್ಕಿನ್?:** ಮೊದಲ ಭಾಗದಲ್ಲಿ ಭೈರವ ಪಾತ್ರದ ಮೂಲಕ ಪ್ರಭಾಸ್ ಅಭಿಮಾನಿಗಳನ್ನು ರಂಜಿಸಿದ್ದರು. ಆದರೆ ಎರಡನೇ ಭಾಗದಲ್ಲಿ ಅವರ ಎದುರು ಇನ್ನಷ್ಟು ಪ್ರಬಲ ಪ್ರತಿ ಸ್ಪರ್ಧಿಯಾಗಿ ಯಾಸ್ಕಿನ್ ಹೊರ ಹೊಮ್ಮುವ ಸಾಧ್ಯತೆ ಇದೆ.

ಒಂದು ಕಡೆ ಕಲ್ಕಿಯ ಆಗಮನಕ್ಕಾಗಿ ಹೋರಾಡುತ್ತಿರುವ ಅಶ್ವತ್ಥಾಮ, ಮತ್ತೊಂದು ಕಡೆ ಅಸಾಧಾರಣ ಶಕ್ತಿ ಪಡೆದ ಯಾಸ್ಕಿನ್ ಹಾಗೂ ಮಧ್ಯದಲ್ಲಿ ತನ್ನದೇ ಆದ ಹಾದಿಯಲ್ಲಿ ಸಾಗುತ್ತಿರುವ ಭೈರವ–ಈ ತ್ರಿಕೋನ ಸಂಘರ್ಷವೇ ಚಿತ್ರದ ಆತ್ಮವಾಗಲಿದೆ ಎಂದು ಹೇಳ ಲಾಗುತ್ತಿದೆ. ಪ್ರಭಾಸ್ ಮತ್ತು ಕಮಲ್ ಹಾಸನ್ ನಡುವಿನ ಮುಖಾಮುಖಿ ದೃಶ್ಯಗಳು ಭಾರತೀಯ ಚಿತ್ರ ರಂಗ ದಲ್ಲೇ ಹೊಸ ಇತಿಹಾಸ ಬರೆಯಬಹುದು ಎಂಬ ನಿರೀಕ್ಷೆಯೂ ಅಭಿಮಾನಿ ಗಳಲ್ಲಿದೆ.

**ಮಹಾಭಾರತ ದೊಂದಿಗೆ ಭವಿಷ್ಯದ ಜಗತ್ತಿನ ಸಂಗಮ:** ‘ಕಲ್ಕಿ 2898 ಎಡಿ’ ಚಿತ್ರದ ಪ್ರಮುಖ ವಿಶೇಷತೆ ಯೇ ಪುರಾಣ ಮತ್ತು ವಿಜ್ಞಾನ ಕಾದಂಬರಿಯ ಅಪೂರ್ವ ಮಿಶ್ರಣ. ಮಹಾಭಾರತದ ಅಶ್ವತ್ಥಾಮ, ಕಲ್ಕಿ ಅವತಾರ ಹಾಗೂ ಪೌರಾಣಿಕ ಅಂಶಗಳನ್ನು ಭವಿಷ್ಯದ ಜಗತ್ತಿನೊಂದಿಗೆ ನಿರ್ದೇಶಕ ನಾಗ್ ಅಶ್ವಿನ್ ಜೋಡಿಸಿರುವ ವಿಧಾನ ವಿಶೇಷ ಮೆಚ್ಚುಗೆಗೆ ಪಾತ್ರವಾಗಿತ್ತು.

ಎರಡನೇ ಭಾಗದಲ್ಲಿ ಈ ಕಥಾ ಹಂದರ ಮತ್ತಷ್ಟು ಆಳ ಪಡೆಯುವ ನಿರೀಕ್ಷೆಯಿದ್ದು, ಮಹಾಭಾರತದ ಅನೇಕ ರಹಸ್ಯಗಳು ಹಾಗೂ ಕಲ್ಕಿ ಅವತಾರದ ಮಹತ್ವ ಇನ್ನಷ್ಟು ವಿಸ್ತಾರವಾಗಿ ತೆರೆ ಮೇಲೆ ಮೂಡಿಬರಲಿದೆ ಎಂದು ಅಭಿಮಾನಿಗಳು ನಿರೀಕ್ಷಿಸುತ್ತಿದ್ದಾರೆ.

**ಭಾರತೀಯ ಸಿನಿರಂಗದ ಮಹತ್ವಾಕಾಂಕ್ಷೆಯ ಯೋಜನೆ:** ‘ಕಲ್ಕಿ 2898 ಎಡಿ’ ಚಿತ್ರದಲ್ಲಿ ಪ್ರಭಾಸ್, ಅಮಿತಾಬ್ ಬಚ್ಚನ್, ದೀಪಿಕಾ ಪಡುಕೋಣೆ ಹಾಗೂ ಕಮಲ್ ಹಾಸನ್ ಸೇರಿದಂತೆ ಭಾರತದ ಅಗ್ರ ತಾರಾಗಣವೇ ಒಂದೇ ಚಿತ್ರದಲ್ಲಿ ನಟಿಸಿದೆ. ಈ ಕಾರಣದಿಂದಲೇ ಈ ಸಿನಿಮಾ ಭಾರತೀಯ ಸಿನಿರಂಗದ ಅತ್ಯಂತ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಒಂದಾಗಿ ಗುರುತಿಸಿಕೊಂಡಿದೆ.

ಮೊದಲ ಭಾಗದ ಭರ್ಜರಿ ಯಶಸ್ಸಿನ ಬಳಿಕ ಎರಡನೇ ಭಾಗದ ಬಗ್ಗೆ ಅಭಿಮಾನಿಗಳ ನಿರೀಕ್ಷೆ ಮತ್ತಷ್ಟು ಹೆಚ್ಚಾಗಿದೆ. ವಿಶೇಷವಾಗಿ ಯಾಸ್ಕಿನ್ ಪಾತ್ರದ ಹೊಸ ಅವತಾರ, ಪ್ರಭಾಸ್–ಕಮಲ್ ಹಾಸನ್ ಮುಖಾಮುಖಿ ಹಾಗೂ ಮಹಾಭಾರತದ ಮುಂದುವರಿದ ಕಥಾಹಂದರ ಚಿತ್ರದ ಮೇಲೆ ಅಪಾರ ಕುತೂಹಲ ಮೂಡಿಸಿದೆ.

# ಎದೆ ಉರಿಯಿಂದ 4 ವರ್ಷದ ಬಾಲಕ ಸಾವು



**ಚಿತ್ರದುರ್ಗ:** ತನಗೆ ಎದೆ ಉರಿಯುತ್ತಿದೆ ಎಂದು ಪೋಷಕರಿಗೆ ತಿಳಿಸಿದ್ದ ನಾಲ್ಕು ವರ್ಷದ ಬಾಲಕನೊಬ್ಬ ಆಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲೇ ಮೃತಪಟ್ಟಿರುವ ದುರ್ಘಟನೆ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ನಗರದಲ್ಲಿ ನಡೆದಿದೆ. ಬಾಲಕನ ಅಕಾಲಿಕ ಸಾವಿನಿಂದ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದ್ದು, ಸ್ಥಳೀಯರಲ್ಲಿ ಆತಂಕ ಮನೆಮಾಡಿದೆ.

ಮೃತ ಬಾಲಕನನ್ನು ವೈಷ್ಣವ್ (4) ಎಂದು ಗುರುತಿಸಲಾಗಿದ್ದು, ಅವರು ಹಿರಿಯೂರು ಬಿಜೆಪಿ ಮಂಡಲ ಅಧ್ಯಕ್ಷ ಅಭಿನಂದನ್ ಅವರ ಪುತ್ರನಾಗಿದ್ದಾರೆ. ಮನೆಯಲ್ಲಿದ್ದ ವೇಳೆ ವೈಷ್ಣವ್ ತನಗೆ ಎದೆ ಉರಿಯುತ್ತಿರುವುದಾಗಿ ಪೋಷಕರಿಗೆ ತಿಳಿಸಿದ್ದಾನೆ ಎನ್ನಲಾಗಿದೆ.

ಮಗನ ಆರೋಗ್ಯದಲ್ಲಿ ಏಕಾಏಕಿ ಸಮಸ್ಯೆ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಆತಂಕಗೊಂಡ ಪೋಷಕರು ಕೂಡಲೇ ಸಮೀಪದ ಆಸ್ಪತ್ರೆಗೆ ಕರೆದೊಯ್ಯಲು ಮುಂದಾಗಿದ್ದಾರೆ. ಆದರೆ ಆಸ್ಪತ್ರೆಗೆ ತಲುಪುವ ಮುನ್ನವೇ ಬಾಲಕ ಕೊನೆಯುಸಿರೆಳೆದಿದ್ದಾನೆ ಎಂದು ತಿಳಿದುಬಂದಿದೆ.

ಬಾಲಕನ ಹಠಾತ್ ಸಾವಿನ ಸುದ್ದಿ ಕುಟುಂಬಸ್ಥರು ಮತ್ತು ಬಂಧು ಬಳಗಕ್ಕೆ ಆಘಾತ ಉಂಟುಮಾಡಿದ್ದು, ಸಂತಸದ ವಾತಾವರಣದಲ್ಲಿದ್ದ ಕುಟುಂಬವನ್ನು ದುಃಖದ ಮಡುವಿಗೆ ತಳ್ಳಿದೆ. ನಾಲ್ಕೇ ವರ್ಷಗಳ ಬಾಲಕನ ಸಾವನ್ನು ಕಂಡು ಕುಟುಂಬಸ್ಥರ ಆಕ್ರಂದನ ಮನಕಲಕುವಂತಿತ್ತು.

ಪ್ರಾಥಮಿಕ ಮಾಹಿತಿಯ ಪ್ರಕಾರ, ಹೃದಯಾಘಾತದಿಂದ ಬಾಲಕ ಮೃತಪಟ್ಟಿರ ಬಹುದೆಂಬ ಶಂಕೆ ವ್ಯಕ್ತವಾಗಿದೆ. ಆದರೆ ವೈದ್ಯಕೀಯ ಪರೀಕ್ಷೆ ಮತ್ತು ಮರಣೋತ್ತರ ವರದಿ ಬಳಿಕವೇ ಸಾವಿನ ನಿಖರ ಕಾರಣ ತಿಳಿದುಬರಬೇಕಿದೆ. ವೈದ್ಯರ ಅಧಿಕೃತ ವರದಿ ಬರುವವರೆಗೆ ಸಾವಿನ ಕಾರಣದ ಬಗ್ಗೆ ಊಹಾಪೋಹಗಳಿಗೆ ಅವಕಾಶ ನೀಡಬಾರದು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಮಕ್ಕಳಲ್ಲೂ ಹೃದಯ ಸಂಬಂಧಿ ಸಮಸ್ಯೆಗಳು ಹಾಗೂ ಹಠಾತ್ ಆರೋಗ್ಯ ತೊಂದರೆಗಳು ವರದಿಯಾಗುತ್ತಿರುವುದು ಪೋಷಕರಲ್ಲಿ ಆತಂಕ ಹೆಚ್ಚಿಸಿದೆ. ಮಕ್ಕಳ ಆರೋಗ್ಯದಲ್ಲಿ ಸಣ್ಣ ಲಕ್ಷಣಗಳು ಕಂಡುಬಂದರೂ ನಿರ್ಲಕ್ಷ್ಯ ಮಾಡದೇ ತಕ್ಷಣ ವೈದ್ಯರನ್ನು ಸಂಪರ್ಕಿಸುವುದು ಅತ್ಯಗತ್ಯ ಎಂದು ವೈದ್ಯರು ಸಲಹೆ ನೀಡುತ್ತಾರೆ.

ವೈಷ್ಣವ್ ಅವರ ಅಕಾಲಿಕ ನಿಧನಕ್ಕೆ ರಾಜಕೀಯ ಮುಖಂಡರು, ಸ್ನೇಹಿತರು ಹಾಗೂ ಸಾರ್ವಜನಿಕರು ಸಂತಾಪ ಸೂಚಿಸಿದ್ದು, ಕುಟುಂಬಕ್ಕೆ ದುಃಖ ಭರಿಸುವ ಶಕ್ತಿ ನೀಡುವಂತೆ ಪ್ರಾರ್ಥಿಸಿದ್ದಾರೆ.

# ವಿಧವೆ ಪ್ರೀತಿಗಾಗಿ ಪತ್ನಿಯನ್ನೇ ಬಲಿ ಪಡೆದ ಪತಿ!

**ಬೆಳಗಾವಿ:** ವಿಧವೆ ಮೇಲಿನ ಮೋಹಕ್ಕೆ ಪಾಪಿ ಪತಿಯೊಬ್ಬ ದೇವಿ ಪ್ರಸಾದವೆಂದು ಹೇಳಿ ಪತ್ನಿಗೆ ಇಲಿ ಪಾಷಾಣ ಕುಡಿಸಿ ಕೊಲೆಗೈದಿರುವ ಘಟನೆ ಗೋಕಾಕ ತಾಲೂಕಿನ ಶಿಂದಿಕುರಬೇಟ ಗ್ರಾಮದಲ್ಲಿ ನಡೆದಿದೆ.

ಅಧಿಕ ಮಾಸವಿದೆ ಎಂದು ದಂಪತಿ ಬೈಲಹೊಂಗಲ ತಾಲೂಕಿನ ಮರುಕುಂಬಿ ಗ್ರಾಮದಲ್ಲಿರುವ ಚಾಮುಂಡೇಶ್ವರಿ ದೇಗುಲಕ್ಕೆ ಹೋಗಿದ್ದರು. ದೇವಾಸ್ಥಾನದಿಂದ ಹಿಂತಿರುಗುವಾಗ ತಂಪುಪಾನೀಯದಲ್ಲಿ ಸಂತೋಷ್ ಇಲಿ ಪಾಷಾಣ ಹಾಗೂ ಬಳೆ ಚೂರು ಬೆರೆಸಿ ದೇವಿ ಪ್ರಸಾದ ಎಂದು ಹೆಂಡತಿಗೆ ಕುಡಿಯಲು ಕೊಟ್ಟಿದ್ದಾನೆ. ಪತಿಯ ಮಾತನ್ನು ನಂಬಿ ಇಲಿ ಪಾಷಾಣ ಕುಡಿದ ಸಕ್ಕುಬಾಯಿ ನಡುರಸ್ತೆಯಲ್ಲೇ ಪ್ರಜ್ಞೆತಪ್ಪಿ ಬಿದ್ದಿದ್ದಾಳೆ. ಈ ವೇಳೆ ಪತಿ ಆಕೆಯ ಕತ್ತು ಹಿಸುಕಿ ಕೊಲೆಗೈದಿದ್ದಾನೆ ಎನ್ನಲಾಗಿದೆ.

ಇಷ್ಟೆಲ್ಲಾ ಆದ ಬಳಿಕ ಕೊಲೆಯನ್ನ ಅಪಘಾತ ಎಂದು ಬಿಂಬಿಸಲು ಬೈಕ್ ಅನ್ನೇ ಪತ್ನಿ ಮೇಲೆ ಎತ್ತಿ ಹಾಕಿದ್ದಾನೆ. ಬಳಿಕ 2–3 ಗಂಟೆಗಳ ರಸ್ತೆ ಪಕ್ಕ ಹೈಡ್ರಾಮಾ ಮಾಡಿದ್ದಾನೆ. ಯಾರೂ ಗಮನಿಸದಿದ್ದಾಗ ಸ್ವತಃ ತಾನೇ ಪೊಲೀಸ್ ಕಂಟ್ರೋಲ್ ರೂಮ್‌ಗೆ ಕರೆ ಮಾಡಿದ್ದಾನೆ. ಮಾಹಿತಿ ತಿಳಿದ ಕೂಡಲೇ ಪೊಲೀಸರು ಹಾಗೂ ಅಂಬುಲೆನ್ಸ್ ಸಿಬ್ಬಂದಿ ಸ್ಥಳಕ್ಕೆ ಧಾವಿಸಿದ್ದಾರೆ.

ಈ ವೇಳೆ ಸಕ್ಕುಬಾಯಿ ಮೃತದೇಹ ನೋಡಿದ ಪೊಲೀಸರಿಗೆ ಅನುಮಾನ ಬಂದಿದೆ. ಈ ಹಿನ್ನೆಲೆ ಆಕೆಯ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆಂದು ಬೆಳಗಾವಿಯ ಬೀಮ್ಸ್ ಆಸ್ಪತ್ರೆಗೆ ರವಾನಿಸಲಾಗಿದೆ. ಮರಣೋತ್ತರ ಪರೀಕ್ಷೆಯ ಪ್ರಾಥಮಿಕ ವರದಿಯಲ್ಲಿ ಇದು ಅಪಘಾತವಲ್ಲ ಕೊಲೆ ಎಂದು ತಿಳಿದುಬಂದಿದೆ. ಈ ಹಿನ್ನೆಲೆ ಸಂತೋಷನನ್ನ ವಶಕ್ಕೆ ಪಡೆದ ಪೊಲೀಸರು ತೀವ್ರ ವಿಚಾರಣೆ ನಡೆಸಿದ್ದಾರೆ.ಗಿ

ವಿಚಾರಣೆಯ ವೇಳೆ ಸಂತೋಷ ತನ್ನ ಪ್ರೇಯಸಿ ಜೊತೆಗೆ ಜೀವನ ನಡೆಸಲು ಪತ್ನಿಯನ್ನು ಕೊಂದಿರುವುದಾಗಿ ಬಾಯಿಬಿಟ್ಟಿದ್ದಾನೆ. 9 ವರ್ಷಗಳ ಹಿಂದೆ ಈತ ಧಾರವಾಡ ತಾಲೂಕಿನ ಕಲ್ಲೂರು ಗ್ರಾಮದ ಸಕ್ಕುಬಾಯಿ ಜೊತೆಗೆ ವಿವಾಹವಾಗಿದ್ದ. ಕಳೆದ 4 ವರ್ಷಗಳಿಂದ ಸಂತೋಷ ವಿಧವೆ ಜೊತೆಗೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದ ಎನ್ನಲಾಗಿದೆ.

# ಶಿಸ್ತು ಉಲ್ಲಂಘನೆ: ವೈಭವ್ ಸೂರ್ಯವಂಶಿ ವಿರುದ್ಧ ಐಸಿಸಿ ಕಠಿಣ ಕ್ರಮ?


## ಐಸಿಸಿ ನೀತಿ ಸಂಹಿತೆ ಉಲ್ಲಂಘನೆ ಸಾಬೀತಾದರೆ ದಂಡ ಹಾಗೂ ನಿಷೇಧ ಸಾಧ್ಯತೆ

**ದಂಬುಲ್ಲಾ:** ಭಾರತ ಎ ಮತ್ತು ಶ್ರೀಲಂಕಾ ಎ ತಂಡಗಳ ನಡುವಿನ ಏಕದಿನ ಸರಣಿಯ ಪಂದ್ಯ ರೋಚಕತೆಯ ಪರಮಾವಧಿಯನ್ನು ತಲುಪಿದರೂ, ಪಂದ್ಯದ ಬಳಿಕ ನಡೆದ ಘಟನೆಯೊಂದು ಇದೀಗ ಕ್ರಿಕೆಟ್ ವಲಯದಲ್ಲಿ ಭಾರೀ ಚರ್ಚೆಗೆ ಕಾರಣವಾಗಿದೆ. ಮೈದಾನದಲ್ಲಿ ಆಟಗಾರರ ನಡುವಿನ ಮಾತಿನ ಚಕಮಕಿ, ತಳ್ಳಾಟ ಹಾಗೂ ಐಸಿಸಿ ತನಿಖೆಯ ಸಾಧ್ಯತೆಗಳು ಅಭಿಮಾನಿಗಳ ಗಮನ ಸೆಳೆದಿವೆ.

ದಂಬುಲ್ಲಾದಲ್ಲಿ ನಡೆದ ಈ ಪಂದ್ಯ ಆರಂಭದಿಂದಲೇ ಕುತೂಹಲ ಮೂಡಿಸಿತ್ತು. ಯುವ ಆಟಗಾರರಿಂದ ಕೂಡಿದ್ದ ಭಾರತ ಎ ತಂಡ ಉತ್ತಮ ಆರಂಭದ ನಿರೀಕ್ಷೆಯೊಂದಿಗೆ ಕಣಕ್ಕಿಳಿದಿತ್ತು. ಆರಂಭಿಕ ಬ್ಯಾಟರ್‌ಗಳು ಉತ್ತಮ ಪ್ರದರ್ಶನ ನೀಡಿದರೂ, ಮಧ್ಯಮ ಕ್ರಮಾಂಕದ ವೈಫಲ್ಯದಿಂದಾಗಿ ತಂಡ ದೊಡ್ಡ ಮೊತ್ತ ಕಲೆಹಾಕುವಲ್ಲಿ ವಿಫಲವಾಯಿತು.

ಭಾರತ ಎ ತಂಡ 49.2 ಓವರ್‌ಗಳಲ್ಲಿ 265 ರನ್‌ಗಳಿಗೆ ಆಲೌಟ್ ಆಯಿತು. ತಂಡದ ಪರ ಕೆಲ ಆಟಗಾರರು ಜವಾಬ್ದಾರಿಯುತ ಆಟವಾಡಿದರೂ, ನಿರ್ಣಾಯಕ ಹಂತದಲ್ಲಿ ವಿಕೆಟ್‌ಗಳನ್ನು ಕಳೆದುಕೊಂಡ ಪರಿಣಾಮ 300 ರನ್‌ಗಳ ಗಡಿ ತಲುಪಲು ಸಾಧ್ಯವಾಗಲಿಲ್ಲ.

266 ರನ್‌ಗಳ ಗುರಿ ಬೆನ್ನತ್ತಿದ ಶ್ರೀಲಂಕಾ ಎ ತಂಡವೂ ಆರಂಭದಲ್ಲಿ ಎಚ್ಚರಿಕೆಯ ಆಟವಾಡಿತು. ಭಾರತದ ಬೌಲರ್‌ಗಳು ಒತ್ತಡ ಹೇರಿದರೂ, ಶ್ರೀಲಂಕಾ ಬ್ಯಾಟರ್‌ಗಳು ಶಾಂತಚಿತ್ತದಿಂದ ಇನ್ನಿಂಗ್ಸ್ ಕಟ್ಟಿದರು. ಪಂದ್ಯದ ಕೊನೆಯ ಓವರ್‌ಗಳಲ್ಲಿ ಎರಡೂ ತಂಡಗಳ ಆಟಗಾರರು



ಗೆಲುವಿಗಾಗಿ ತೀವ್ರ ಹೋರಾಟ ನಡೆಸಿದರು.

ಕೊನೆಯ ಎಸೆತದವರೆಗೂ ಸಾಗಿದ ಪಂದ್ಯದಲ್ಲಿ ಶ್ರೀಲಂಕಾ ಎ ತಂಡವೂ ನಿಗದಿತ 50 ಓವರ್‌ಗಳಲ್ಲಿ 265 ರನ್ ಗಳಿಸಿ ಪಂದ್ಯವನ್ನು ಟೈ ಮಾಡಿಕೊಂಡಿತು. ಇದರಿಂದ ಪಂದ್ಯ ಫಲಿತಾಂಶಕ್ಕಾಗಿ ಸೂಪರ್ ಓವರ್ ಮೊರೆ ಹೋಗಲಾಯಿತು.

**ಸೂಪರ್ ಓವರ್‌ನಲ್ಲಿ ಶ್ರೀಲಂಕಾ ಮೇಲುಗೈ:** ಸೂಪರ್ ಓವರ್‌ನಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಶ್ರೀಲಂಕಾ ಎ ತಂಡ ಆಕ್ರಮಣಕಾರಿ ಆಟ ಪ್ರದರ್ಶಿಸಿ 16 ರನ್ ಗಳಿಸಿತು. ಭಾರತ ಎ ತಂಡದ ಬೌಲರ್‌ಗಳ ಮೇಲೆ ಒತ್ತಡ ಹೇರುವಲ್ಲಿ ಶ್ರೀಲಂಕಾ ಯಶಸ್ವಿಯಾಯಿತು.

17 ರನ್‌ಗಳ ಗುರಿ ಬೆನ್ನತ್ತಿದ ಭಾರತ ಎ ತಂಡ ಆರಂಭದಲ್ಲೇ ಒತ್ತಡಕ್ಕೆ ಒಳಗಾಯಿತು. ನಿರ್ಣಾಯಕ ಕ್ಷಣದಲ್ಲಿ ಬ್ಯಾಟರ್‌ಗಳು ನಿರೀಕ್ಷಿತ ಪ್ರದರ್ಶನ ನೀಡಲು ವಿಫಲರಾದರು. ಪರಿಣಾಮ ಆರು ಎಸೆತಗಳಲ್ಲಿ ಕೇವಲ 9 ರನ್ ಗಳಿಸಿ ಭಾರತ ಎ ತಂಡ 7 ರನ್‌ಗಳ ಸೋಲು ಅನುಭವಿಸಿತು.

ಸೂಪರ್ ಓವರ್‌ನಲ್ಲಿ ಸೋಲು ಕಂಡ ಭಾರತ ಎ ತಂಡದ ಆಟಗಾರರಲ್ಲಿ ನಿರಾಸೆ ಮನೆ ಮಾಡಿದ್ದರೆ, ಶ್ರೀಲಂಕಾ ತಂಡದಲ್ಲಿ ಸಂಭ್ರಮ ಮನೆ ಮಾಡಿತ್ತು.

**ಪಂದ್ಯದ ಬಳಿಕ ಮಾತಿನ ಚಕಮಕಿ:** ಸೋಲಿನ ಬಳಿಕ ಆಟಗಾರರು ಪೆವಿಲಿಯನ್‌ಗೆ ಮರಳುತ್ತಿದ್ದ ಸಂದರ್ಭದಲ್ಲಿ ಭಾರತದ ಯುವ ಆಟಗಾರ ವೈಭವ್ ಸೂರ್ಯವಂಶಿ ಹಾಗೂ ಶ್ರೀಲಂಕಾದ ವಿಶೇನ್ ಹಾಲಂಬಾ ನಡುವೆ ಮಾತಿನ ಚಕಮಕಿ ನಡೆದಿರುವುದು ವರದಿಯಾಗಿದೆ.

ಶ್ರೀಲಂಕಾ ಆಟಗಾರರ ಹೇಳಿಕೆ ಅಥವಾ ಸಂಭ್ರಮಾಚರಣೆ ವೈಭವ್‌ಗೆ ಅಸಮಾಧಾನ ತಂದಿರಬಹುದು ಎನ್ನಲಾಗುತ್ತಿದೆ. ಇದರಿಂದ ಇಬ್ಬರು ಆಟಗಾರರ ನಡುವೆ ವಾಗ್ವಾದ ನಡೆದಿದ್ದು, ಪರಿಸ್ಥಿತಿ ಕೆಲ ಕ್ಷಣಗಳ ಕಾಲ ಉದ್ವಿಗ್ನಗೊಂಡಿತ್ತು.

ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿರುವ ವಿಡಿಯೋ ದೃಶ್ಯಗಳಲ್ಲಿ ವೈಭವ್ ಸೂರ್ಯವಂಶಿ ಎದುರಾಳಿ ಆಟಗಾರನತ್ತ ತೆರಳಿ ಮಾತಿನ ಚಕಮಕಿ ನಡೆಸುತ್ತಿರುವುದು ಕಾಣಿಸುತ್ತದೆ. ಅಲ್ಲದೆ, ಅವರು ವಿಶೇನ್ ಹಾಲಂಬಾ ಅವರನ್ನು ಕೈಯಿಂದ ತಳ್ಳಿದಂತೆ ಕಂಡುಬರುವ ದೃಶ್ಯವೂ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಈ ವಿಡಿಯೋ ವೈರಲ್ ಆದ ಬೆನ್ನಲ್ಲೇ ಕ್ರಿಕೆಟ್ ಅಭಿಮಾನಿಗಳು ಎರಡು ಗುಂಪುಗಳಾಗಿ ವಿಭಜನೆಯಾಗಿದ್ದಾರೆ. ಕೆಲವರು ವೈಭವ್ ವರ್ತನೆಯನ್ನು ಖಂಡಿಸಿದ್ದರೆ, ಇನ್ನು ಕೆಲವರು ಮೊದಲು ಪ್ರಚೋದನೆ ಯಾರಿಂದ ನಡೆಯಿತು ಎಂಬುದನ್ನು ತನಿಖೆಯಿಂದ ತಿಳಿಯಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ.

**ಐಸಿಸಿ ತನಿಖೆ ಆರಂಭ?:** ಘಟನೆಯ ಬಗ್ಗೆ ಪಂದ್ಯ ರೆಫರಿ ಪ್ರದೀಪ್ ಜಯಪ್ರಗಾಶ್ ವರದಿ ಸಂಗ್ರಹಿಸುತ್ತಿದ್ದು, ವಿಡಿಯೋ ಸಾಕ್ಷ್ಯಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ತಿಳಿದುಬಂದಿದೆ. ಅಂಪೈರ್‌ಗಳ ವರದಿ, ಆಟಗಾರರ ಹೇಳಿಕೆ ಮತ್ತು ವಿಡಿಯೋ ದೃಶ್ಯಗಳ ಆಧಾರದ ಮೇಲೆ ಮುಂದಿನ ಕ್ರಮ ಕೈಗೊಳ್ಳುವ ಸಾಧ್ಯತೆಯಿದೆ.

ಐಸಿಸಿ ನೀತಿ ಸಂಹಿತೆಯ ಪ್ರಕಾರ ಮೈದಾನದಲ್ಲಿ ಎದುರಾಳಿ ಆಟಗಾರರೊಂದಿಗೆ ಅಸಭ್ಯ ವರ್ತನೆ, ಶಾರೀರಿಕ ಸ್ಪರ್ಶ ಅಥವಾ ತಳ್ಳಾಟ ನಡೆಸುವುದು ಗಂಭೀರ ಉಲ್ಲಂಘನೆಯಾಗಿ ಪರಿಗಣಿಸಲಾಗುತ್ತದೆ.

**ಲೆವೆಲ್–2 ಅಥವಾ ಲೆವೆಲ್–3 ಪ್ರಕರಣವಾಗುವ ಸಾಧ್ಯತೆ:** ಐಸಿಸಿ ನಿಯಮಾವಳಿಯ ಅಡಿಯಲ್ಲಿ ಈ ಪ್ರಕರಣ ಲೆವೆಲ್–2 ಅಥವಾ ಲೆವೆಲ್–3 ವಿಭಾಗದ ಉಲ್ಲಂಘನೆಯಾಗಿ ಪರಿಗಣಿಸಲ್ಪಡುವ ಸಾಧ್ಯತೆಯಿದೆ. ಒಂದು ವೇಳೆ ಆರೋಪ ಸಾಬೀತಾದರೆ ವೈಭವ್ ಸೂರ್ಯವಂಶಿಗೆ ಪಂದ್ಯ ಶುಲ್ಕದ ಶೇಕಡಾ 100ರಷ್ಟು ದಂಡ ವಿಧಿಸಬಹುದಾಗಿದೆ.

ಇದರ ಜೊತೆಗೆ ಡಿಮೆರಿಟ್ ಪಾಯಿಂಟ್‌ಗಳು ಅಥವಾ ಕೆಲವು ಪಂದ್ಯಗಳಿಂದ ಅಮಾನತು ಶಿಕ್ಷೆಯನ್ನೂ ವಿಧಿಸುವ ಅವಕಾಶವಿದೆ. ಆದರೆ ಇದು ತನಿಖೆಯ ಅಂತಿಮ ವರದಿಯ ಮೇಲೆ ಅವಲಂಬಿತವಾಗಿರುತ್ತದೆ.

**ವಿಶೇನ್ ಹಾಲಂಬಾ ವರ್ತನೆಯೂ ಪರಿಶೀಲನೆ:** ಘಟನೆಯಲ್ಲಿ ಶ್ರೀಲಂಕಾದ ಆಟಗಾರ ವಿಶೇನ್ ಹಾಲಂಬಾ ಅವರ ಪಾತ್ರವೂ ತನಿಖೆಗೆ ಒಳಪಟ್ಟಿದೆ. ಮಾತಿನ ಚಕಮಕಿ ಹೇಗೆ ಆರಂಭವಾಯಿತು? ಯಾರು ಮೊದಲು ಪ್ರಚೋದನೆ ನೀಡಿದರು? ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕಲಾಗುತ್ತಿದೆ.

ಒಂದು ವೇಳೆ ಎದುರಾಳಿ ಆಟಗಾರರಿಂದಲೂ ನಿಯಮ ಉಲ್ಲಂಘನೆ ನಡೆದಿರುವುದು ಸಾಬೀತಾದರೆ ಅವರ ಮೇಲೂ ಐಸಿಸಿ ಕ್ರಮ ಕೈಗೊಳ್ಳುವ ಸಾಧ್ಯತೆ ಇದೆ.

**ಯುವ ಆಟಗಾರರಿಗೆ ಸಂಯಮದ ಪಾಠ:** ಅಂತರರಾಷ್ಟ್ರೀಯ ಮಟ್ಟದಲ್ಲಿ ಯುವ ಆಟಗಾರರ ಪ್ರತಿಯೊಂದು ನಡೆ–ನುಡಿಗೂ ಹೆಚ್ಚಿನ ಮಹತ್ವವಿರುತ್ತದೆ. ಮೈದಾನದಲ್ಲಿ ಭಾವನೆಗಳನ್ನು ನಿಯಂತ್ರಿಸುವುದು ಆಟಗಾರರ ವೃತ್ತಿಪರತೆಯ ಭಾಗವಾಗಿದೆ.

ಕ್ರಿಕೆಟ್ ಅನ್ನು “ಜೆಂಟಲ್‌ಮೆನ್ಸ್ ಗೇಮ್” ಎಂದು ಕರೆಯಲಾಗುತ್ತದೆ. ಆದ್ದರಿಂದ ಕಠಿಣ ಸ್ಪರ್ಧೆಯ ನಡುವೆಯೂ ಕ್ರೀಡಾ ಸ್ಫೂರ್ತಿಯನ್ನು ಕಾಪಾಡುವುದು ಅತ್ಯಗತ್ಯ ಎಂದು ಮಾಜಿ ಆಟಗಾರರು ಅಭಿಪ್ರಾಯಪಟ್ಟಿದ್ದಾರೆ.

ಸದ್ಯ ಕ್ರಿಕೆಟ್ ಅಭಿಮಾನಿಗಳ ಕಣ್ಣು ಐಸಿಸಿ ಕೈಗೊಳ್ಳುವ ಅಂತಿಮ ಕ್ರಮದತ್ತ ನೆಟ್ಟಿದ್ದು, ವೈಭವ್ ಸೂರ್ಯವಂಶಿ ಮತ್ತು ವಿಶೇನ್ ಹಾಲಂಬಾ ವಿರುದ್ಧ ಯಾವ ರೀತಿಯ ಕ್ರಮ ಕೈಗೊಳ್ಳಲಾಗುತ್ತದೆ ಎಂಬುದು ಕುತೂಹಲಕ್ಕೆ ಕಾರಣವಾಗಿದೆ. ತನಿಖೆಯ ಬಳಿಕವೇ ಈ ವಿವಾದಕ್ಕೆ ತೆರೆ ಬೀಳುವ ಸಾಧ್ಯತೆಯಿದೆ. ದಂಬುಲ್ಲಾದಲ್ಲಿ ನಡೆದ ಭಾರತ ಎ ಹಾಗೂ ಶ್ರೀಲಂಕಾ ಎ ನಡುವಿನ ಪಂದ್ಯ ಕ್ರಿಕೆಟ್ ಅಭಿಮಾನಿಗಳಿಗೆ ಭರಪೂರ ಮನರಂಜನೆ ನೀಡಿದರೂ, ಪಂದ್ಯದ ಬಳಿಕ ನಡೆದ ಆಟಗಾರರ ನಡುವಿನ ಘರ್ಷಣೆ ಈಗ ಚರ್ಚೆಯ ಕೇಂದ್ರಬಿಂದುವಾಗಿದೆ. ಸೂಪರ್ ಓವರ್ ಸೋಲಿನ ನಿರಾಸೆಯಲ್ಲಿ ಇದ್ದ ವೈಭವ್ ಸೂರ್ಯವಂಶಿ ಹಾಗೂ ಶ್ರೀಲಂಕಾದ ವಿಶೇನ್ ಹಾಲಂಬಾ ನಡುವೆ ಉಂಟಾದ ವಾಗ್ವಾದ ಐಸಿಸಿ ತನಿಖೆಯ ಹಂತ ತಲುಪಿದೆ. ಈಗ ಎಲ್ಲರ ಚಿತ್ತ ಐಸಿಸಿ ನೀಡುವ ಅಂತಿಮ ತೀರ್ಪಿನತ್ತ ನೆಟ್ಟಿದೆ.